

## ದ್ರಾಕ್ಷಿ ಹಣ್ಣಿನ ಜಾಮ್

ಏನೇನು ಬೇಕು ?

ದ್ರಾಕ್ಷಿಹಣ್ಣು ಒಂದು ಕಪ್, ಸಕ್ಕರೆ ಒಂದು ಕಪ್, ಏಲಕ್ಕಿ ಪುಡಿ

ಮಾಡೋದು ಹೇಗೆ ?

ದ್ರಾಕ್ಷಿಹಣ್ಣನ್ನು ಮಿಕ್ಸಿಗೆ ಹಾಕಿ ನುಣ್ಣಗೆ ರುಬ್ಬಿ ಸಕ್ಕರೆ ಸೇರಿಸಿ ಪಾಕ ಬರುವವರೆಗೆ ಕಾಯಿಸಿ. ಕೊನೆಯಲ್ಲಿ ಏಲಕ್ಕಿಪುಡಿ ಸೇರಿಸಿ ದೋಸೆಯ ಜತೆ ತುಪ್ಪದೊಂದಿಗೆ ಸೇವಿಸಿ.

## ದ್ರಾಕ್ಷಿಹಣ್ಣಿನ ಸಾಸಿವೆ

ಏನೇನು ಬೇಕು ?

ಹೆಚ್ಚಿದ ದ್ರಾಕ್ಷಿ ಅರ್ಧಕಪ್, ಕಾಯಿತುರಿ ಅರ್ಧಕಪ್, ಮೊಸರು ಅರ್ಧಕಪ್, ಸಾಸಿವೆ ಕಾಳು ಒಂದು ಚಮಚ, ಅರಿಶಿಣ ಅರ್ಧ ಚಮಚ, ಹಸಿಮೆಣಸು ಎರಡು, ತುಪ್ಪ ಎರಡು ಚಮಚ, ಉಪ್ಪು.

ಮಾಡೋದು ಹೇಗೆ ?

ಮಿಕ್ಸಿಗೆ ಕಾಯಿತುರಿ, ಅರಿಶಿಣ, ಸಾಸಿವೆಕಾಳು, ಒಂದು ಹಸಿಮೆಣಸು ಹಾಕಿ ನುಣ್ಣಗೆ ರುಬ್ಬಿಕೊಳ್ಳಿ. ಒಂದು ಪ್ಯಾನ್‌ಗೆ ತುಪ್ಪ, ದ್ರಾಕ್ಷಿ, ಹಸಿಮೆಣಸು, ಹಾಕಿ ಹುರಿದು ರುಬ್ಬಿದ ಮಿಶ್ರಣಕ್ಕೆ ಹಾಕಿ. ಅದಕ್ಕೆ ಮೊಸರು, ಉಪ್ಪು ಸೇರಿಸಿದರೆ ಸಾಸಿವೆ ಸಿದ್ಧ.





## ದ್ರಾಕ್ಷಿಹಣ್ಣಿನ ಹಸಿಚಟ್ನಿ

ಏನೇನು ಬೇಕು ?

ದ್ರಾಕ್ಷಿಹಣ್ಣು ಅರ್ಧ ಕಪ್, ಕಾಯಿತುರಿ ಅರ್ಧ ಕಪ್, ಹಸಿಮೆಣಸು ಮೂರ್ನಾಲ್ಕು, ಇಂಗು, ಉಪ್ಪು.

ಮಾಡೋದು ಹೇಗೆ ?

ಮಿಕ್ಸಿಗೆ ಕಾಯಿತುರಿ, ದ್ರಾಕ್ಷಿ, ಹಸಿಮೆಣಸು, ಇಂಗು, ಉಪ್ಪು ಹಾಕಿ ರುಬ್ಬಿದರೆ ಬಿಳಿಯಾದ ಹಸಿ ಚಟ್ನಿ ತಿನ್ನಬಹುದು.